# ವಿನೂತನ ಕಥನ ಕಾರಣ-2

ತೀವ್ರವಾದ ಒಂದು ಅನುಭವ ಉಂಟಾದರೆ ಅದನ್ನು ಹೇಳುವುದಕ್ಕೆ ಪದಗಳೇ ಸಿಗುವುದಿಲ್ಲ. ಎಂಥ ವಿಚಿತ್ರ! ನಮ್ಮ ಸುತ್ತಮುತ್ತ ಸಿದ್ಧವಾದ ಪದಗಳ ರಾಶಿಯೇ ಇದೆಯಾದರೂ – ನಾವು ಅನುಭವಿಸಿದ್ದು ಆ ಪದಗಳಿಂದ ಹೇಳಲಾಗದ್ದು ಎಂದು ಅನ್ನಿಸುತ್ತಿರುತ್ತದೆ. ಅನುಭವದ ಈ ಜೀವಂತಿಕೆಯೇ ಹೊಸ ಪದಗಳನ್ನು ಸೃಷ್ಟಿಸುವ, ಹೊಸ ಸಂಯೋಜನೆಯನ್ನು ಉಂಟುಮಾಡುವ, ಹಳೆಯ ಪದವನ್ನೆ ಹೊಸ ಅರ್ಥದಲ್ಲಿ ಬಳಸುವ, ಅರ್ಥಕ್ಕೆ ಅರ್ಥಾಂತರವನ್ನು ಕಲ್ಪಿಸುವ ಹೊಸತನಕ್ಕೆ ಪ್ರೇರಕವಾಗಿರುವುದು. ಅನುಭವದ ಜೀವಂತಿಕೆ ಎಂದರೆ ಹೊಸ ಸೃಷ್ಟಿಯನ್ನು ಮಾಡಬಲ್ಲ ಜೀವಂತಿಕೆಯಾಗಿದೆ. ಹೊಸ ನೋಟವನ್ನು ಕೊಡಬಲ್ಲ ಜೀವಂತಿಕೆಯಾಗಿದೆ. ಹಳೆಯ ಪದಗಳನ್ನೆ ಯಾಕೆ ಬಳಸಬಾರದು, ಅದರಲ್ಲೇನು ದೋಷ? ಎಂದರೆ ಪರಂಪರೆಯಲ್ಲಿ ಅನುಕರಣೆಯ ಅಂಶ ಹೇರಳವಾಗಿದೆ ಎನ್ನುವುದೇ ಉತ್ತರ. ಅನುಕರಣವೂ ಬಾಳಿನ ಒಂದು ಸತ್ಯವಲ್ಲವೆ ಎಂದು ಮರಳಿ ಕೇಳಬಹುದು. ನಿಜ. ಹಾಗೆಯೇ ಹೊಸ ಸೃಷ್ಟಿಯೂ ಬಾಳಿನ ಸಹಜ ಸತ್ಯವಾಗಿದೆ; ಎಂದು ಉತ್ತರಿಸಬಹುದು. ಮೊದಲು ತನ್ನ ಅನುಭವವನ್ನು ಹೇಳ ಹೊರಟವನು, ಅವನು ಯಾರನ್ನೂ ಅನುಕರಣ ಮಾಡಿದ್ದಲ್ಲ, ತನ್ನ ಜೀವಂತ ಅನುಭವವನ್ನು ಹೇಳಿದ್ದು, ಅದನ್ನು ಕೇಳಿದ ಅನೇಕರಲ್ಲಿ ಅದು ಅವನದೇ ಅನುಭವವನ್ನು ಉಂಟು ಮಾಡಿರಬೇಕು! ಹೇಳಿದ್ದಕ್ಕೂ ಕೇಳಿದ್ದಕ್ಕೂ ಅದೇ ತಾನೇ ಸಾರ್ಥಕತೆ! ಇದೇ ಕುಶಲ ಕೇಳುಗರ ಪರಂಪರೆ. ಶ್ರೋತ್ರಿಯ ಪರಂಪರೆ. ಶಬ್ದವೊಂದು ಸಿಕ್ಕಿತು ಎಂದರೆ ಅದರ ಹಿಂದಿನ ಅನುಭವ ಸಿಕ್ಕಿತು ಎಂದೇ ಅರ್ಥ. ಆದರೆ, ಯಾವುದೇ ಆದರೂ ನಮಗೆ ಸಿಕ್ಕಿತು ಎಂದಾಗ, ಅದನ್ನು ನಮಗೆ ಬೇಕಾದಂತೆ ಬಳಸುವುದು ಎಂದಿನಿಂದಲೂ ನಡೆದ ವಿದ್ಯಮಾನ. ಸಿಕ್ಕಿತು, ನಮ್ಮ ವಶವಾಯಿತು ಎಂಬ ಭಾವದ ಜತೆಗೇ ಪ್ರಜ್ಞೆಯ (corruption) ಈ ಪ್ರಾರಂಭವಾಗಿರಬೇಕು.

ಶಬ್ದಗಳು ಹೀಗೆ ನಮಗೆ ಸಿಕ್ಕಿದಾಗ ಅದರ ಪಾಡು ದೇವರಿಗೇ ಪ್ರೀತಿ. ಇಲ್ಲದ ಅನುಭವವನ್ನು ಇದೆ ಎಂದು ಬಿಂಬಿಸುವುದಕ್ಕೆ ಶಬ್ದಗಳು ನೆರವಾದವು; ಅಥವಾ ನೆರವಾಗುವಂತಾಯಿತು. ಇದು ಜೀವಂತಿಕೆಯ ಸ್ಥಾನದಲ್ಲಿ ಜಡತೆಯೇ ಬದಲಿಯಾಗಿ ಬಂದು ಕುಳಿತಂತೆ. ಆದರೆ, ಅನುಭವದ ಜೀವಂತಿಕೆ ಎಂದರೆ ಎಚ್ಚರವೂ ಆದುದರಿಂದ, ಪದಗಳು ಜಡವಾಗುವ ಸಾಧ್ಯತೆ, ಜೀವಂತಿಕೆಗೆ ತತ್‌ಕ್ಷಣ ತಿಳಿಯುವುದರಿಂದ, ತೀವ್ರವಾದ ಅನುಭವ ಹೊಸ ಮಾತುಗಳಿಗಾಗಿ ಹುಡುಕಾಡುತ್ತದೆ. ಈ ಹುಡುಕಾಟ ಅದರ ಜೀವಂತಿಕೆಯ ಒಂದು ಭಾಗವೇ ಎಂಬಂತೆ ಇದೆ. ಮತ್ತು ಈ ಹುಡುಕಾಟದಿಂದಾಗಿಯೇ, ಜಡವಾದುದನ್ನು ಅದು ನಿರಾಕರಿಸುತ್ತದೆ. ಈ ಕಾರಣದಿಂದಾಗಿಯೇ, ಜೀವಂತವಾದ ಪರಂಪರೆಯಲ್ಲಿ ನಿರಾಕರಣದ ಅಂಶವು ಅನಿವಾರ್ಯವಾಗಿ ಅದರ ಸೃಷ್ಟಿಶೀಲತೆಯ ಭಾಗವಾಗಿರುತ್ತದೆ. ಯೋಚಿಸಿದರೆ, ಅನುಭವವೊಂದು ತಕ್ಕ ಮಾತುಗಳಿಗಾಗಿ ಹುಡುಕಾಡುತ್ತ, ಆ ಹುಡುಕಾಟದಲ್ಲೇ ಇನ್ನಷ್ಟು ಜೀವಂತವಾಗುತ್ತ ಅಥವಾ ಜೀವಂತವಾಗುವುದರ ಅರಿವನ್ನು ಪಡೆಯುತ್ತ ನಡೆಯುವ ಸೋಜಿಗ ಮನಸ್ಸನ್ನು ಆವರಿಸುತ್ತದೆ.

ನಮ್ಮ ಕುಮಾರವ್ಯಾಸ ತನ್ನ ಇಷ್ಟ ದೈವವನ್ನು ವಿನೂತನ ಕಥನ ಕಾರಣ ಎಂದು ಸ್ತುತಿಸಿದುದನ್ನು ಹಿಂದೇ ಇದೇ ಅಂಕಣದಲ್ಲಿ ನೋಡಿದ್ದೆವು. ಈ ವಿನೂತನ ಕಥನ ಕಾರಣ ಎಂಬ ನುಡಿಗಟ್ಟು ಸೃಷ್ಟಿಶೀಲತೆಯ ರಹಸ್ಯವನ್ನೇ ಬಿಚ್ಚಿಡುವಂತಿದೆ!

ವಿದುರನಲ್ಲಿಗೆ ಕೃಷ್ಣ ಬಂದ ಸಂದರ್ಭವನ್ನು ಕವಿ ಚಿತ್ರಿಸುವುದನ್ನು ನೋಡಬಹುದು. ಕೃಷ್ಣ ತನ್ನಲ್ಲಿಗೆ ಬಂದಾನು ಅಂತ ವಿದುರನಿಗೆ ನಿರೀಕ್ಷೆಯೇ ಇರಲಿಲ್ಲ. ಈ ಅನಿರೀಕ್ಷಿತವೇ ಮುಖ್ಯ. ಕೃಷ್ಣ ಬಂದ. ಮನೆಯ ಬಾಗಿಲ ಬಳಿ ಇದ್ದಕ್ಕಿದ್ದಂತೆ ತನ್ನ ಇಷ್ಟ ದೈವವನ್ನು ನೋಡಿ ಎರಡುದೋರದ ಗಾಢ ಭಕ್ತಿಯ ಭರದ ಲವಲವಿಕೆಯಲಿ ವಿಚಿತ್ರವಾದ ಭಾವಾವೇಗಕ್ಕೆ ಸಿಕ್ಕಿ, ವಿದುರ ಸ್ತುತಿಸುವುದುನ್ನು ಕೇಳಬೇಕು:

ವೇದದರಿಕೆಗಳಡಗದುಪನಿಷ/ ದಾದಿ ದಿವ್ಯ ಸ್ಥಿತಿಯ ಗಡಣೆಗೆ/ ಹೋದ ಹೊಲಬಳವಡದ ಮುನಿಗಳ ಮುಖಕೆ ಮನಗುಡದ/ ಕಾದಿ ಕಡಗುವ ತಾರ್ಕಿಕರು ಬೆಂ/ ಡಾದರಲ್ಲದೆ ನಿಜವನರಿಯದ/ ನಾದಿ ಸಿದ್ಧನ ಬರವ ಕಂಡನು ಬಾಗಿಲಲಿ ವಿದುರ.

ಕವಿಯ ಮಾತಾದರೂ ಇದು ವಿದುರನ ಅನುಭವವೇ. ವೇದೋಪನಿಷತ್ತುಗಳೆಲ್ಲ ದಿವ್ಯ ಸ್ತುತಿಯೇ ಇರಬಹುದು. ಆದರೆ ಅವುಗಳಿಗೆ ನಿಜದ ಪತ್ತೆ ಸಿಕ್ಕಿಲ್ಲ. ತಾನು ಕಾಣುತ್ತಿರುವ ನಿಜವನ್ನು ಆ ಹಿಂದಿನ ಮಾತಿನಲ್ಲಿ ಹೇಳುವಂತಿಲ್ಲ. ಅವುಗಳನ್ನು ಉಲ್ಲೇಖಿಸುವುದಾದರೂ, ಅವುಗಳಿಗೆ ಸಿಕ್ಕಿಲ್ಲ. ಅದಕ್ಕಾಗಿ ಅವು ತೊಳಲುತ್ತಿವೆ ಎಂದೇ ಉಲ್ಲೇಖಿಸಬೇಕಾಗುತ್ತದೆ. ಹಳೆ ಮಾತುಗಳಿಗೆ ಸಿಕ್ಕಿಲ್ಲ, ಹೊಸ ಮಾತುಗಳಿಗೆ ಸಿಗುತ್ತಿದೆಯೋ! ಅದೂ ಸಂದೇಹವೇ. ಆದರೂ ಹೊಸ ಮಾತು ಹುಡುಕಲೇಬೇಕಿದೆ./ ಸಿಗದೆ ಇದ್ದರೂ ಅದಕ್ಕಾಗಿ ತುಡಿಯುವ ಹೊಸ ಮಾತು ಕಡಿಮೆ ಧನ್ಯವಲ್ಲ. ಇನ್ನೂ ಒಂದು ಅಚ್ಚರಿ ಎಂದರೆ ಹಳೆ ಮಾತುಗಳಿಗೆ ಸತ್ಯ ಸಿಗಲಿಲ್ಲ ಎಂದರೆ ಅದೊಂದು ಭರ್ತ್ಸನೆಯಾಗದೆ, ಅದೊಂದು ಒಪ್ಪಿಕೊಳ್ಳುವ ಸತ್ಯವೇ ಆಗಿ, ಸತ್ಯಕ್ಕಾಗಿ ಹುಡುಕಾಡಿದ್ದು ನಿಜವಾದರೆ, ಆ ಹುಡುಕಾಟದ ಅನುಭವದಿಂದಲೇ, ಸತ್ಯ ಸಿಗಲಿಲ್ಲ ಎಂಬ ಮಾತು ವಿನಮ್ರವಾದ ಆತ್ಮನಿವೇದನೆಯಾಗಿ ಬಿಡುವ ಅಚ್ಚರಿ! ಮತ್ತು ಮಾತು ಆತ್ಮನಿವೇದನೆಯಾದಾಗ ಅದೇ ಉತ್ಕಟವಾದ ಪ್ರಾರ್ಥನೆಯಾಗಿ, ಸೋಲೇ ಗೆಲುವಾಗಿ, ಕಥನವು ವಿನೂತನವಾಗಿ ಬಿಡುವುದು!

■ ತೋಷ

## ಮಾತೇ ಮುತ್ತು

★ ಶ್ರೇಷ್ಠತೆ ಎನ್ನುವುದು ಸತತ ಪ್ರಕ್ರಿಯೆ. ಅದು ಯಾವತ್ತೂ ಆಕಸ್ಮಿಕ ಅಲ್ಲ.

-ಎ.ಪಿ.ಜೆ.ಅಬ್ದುಲ್ ಕಲಾಂ

★ ಪ್ರೇಮ ಮರದಲ್ಲಿ ಬೆಳೆಯುವುದಿಲ್ಲ, ಮಾರುಕಟ್ಟೆಯಲ್ಲಿ ಸಿಗುವುದಿಲ್ಲ. ನಿನಗೆ ಪ್ರೀತಿ ಬೇಕೆಂದರೆ ಇನ್ನೊಬ್ಬರನ್ನು ಯಾವ ಸ್ವಾರ್ಥವೂ ಇಲ್ಲದೆ ಪ್ರೀತಿಸಲು ಆರಂಭಿಸು.

-ಸಂತ ಕಬೀರ

★ ಯೋಚಿಸುವುದರಿಂದ ನೈಜ ಜ್ಞಾನ ಸಿಗುವುದಿಲ್ಲ. ನೀವು ಏನು ಆಗಿದ್ದೀರೊ, ಏನಾಗಲು ಬಯಸುತ್ತೀರೋ ಅದುವೇ ಜ್ಞಾನ.

-ಶ್ರೀ ಅರವಿಂದರು

★ ಮನುಷ್ಯ ಶ್ರೇಷ್ಠ ಪ್ರಾಣಿ. ಆದರೆ ಕಾನೂನು ಮತ್ತು ನ್ಯಾಯದಿಂದ ವಿಮುಖನಾದಾಗ ಆತನಷ್ಟು ಕೆಟ್ಟ ಪ್ರಾಣಿಯೇ ಇಲ್ಲ.

-ಅರಿಸ್ಟಾಟಲ್

★ ದುಃಖವೆಂದರೆ ಮೌನ, ಅದು ನೀವೇ. ಮನುಷ್ಯ ಮೂಲತಃ ಒಬ್ಬಂಟಿ. ತನ್ನ ಒಬ್ಬಂಟಿತನದ ಆಳಕ್ಕೆ ಇಳಿದು ನೋಡಲು ಮನುಷ್ಯನಿಗೆ ದುಃಖ ನೆರವಾಗುತ್ತದೆ.

-ಓಶೊ ರಜನೀಶ್

★ ಅನುಮಾನ ಇದ್ದಾಗ ಸತ್ಯವನ್ನೇ ಹೇಳಿ.

-ಮಾರ್ಕ್ ಟ್ವೈನ್

★ ಧೈರ್ಯವೆಂದರೆ ಎದ್ದು ನಿಂತು ಮಾತನಾಡುವುದು. ಹಾಗೆಯೇ ಧೈರ್ಯವೆಂದರೆ ಸುಮ್ಮನೆ ಕುಳಿತು ಕೇಳಿಸಿಕೊಳ್ಳುವುದು ಕೂಡಾ.

-ವಿನ್‌ಸ್ಟನ್ ಚರ್ಚಿಲ್

★ ಇದುವೇ ಪ್ರೇಮ. ಪ್ರೇಮದ ಅರಳುವಿಕೆಯೇ ಧ್ಯಾನ.

-ಜಿಡ್ಡು ಕೃಷ್ಣಮೂರ್ತಿ

★ ಸ್ವಯಂ ಸುಧಾರಣೆಯಾದರೆ ತನ್ನಿಂದತಾನೇ ಸಮಾಜ ಸುಧಾರಣೆಯೂ ಆಗುತ್ತದೆ.

-ರಮಣ ಮಹರ್ಷಿ

★ ಉತ್ತಮವಾಗಿ ಹೇಗೆ ಜೀವಿಸಬೇಕೆಂಬುದು ನನಗೆ ಗೊತ್ತಿಲ್ಲ. ಕಷ್ಟ ಪಡುವುದಷ್ಟೇ ನನಗೆ ಗೊತ್ತು.

-ಬಾಬ್ ಮಾರ್ಲೆ

★ ಮೂರ್ಖತನ ಮತ್ತು ಬುದ್ಧಿವಂತಿಕೆಯ ನಡುವಣ ವ್ಯತ್ಯಾಸ ಇಷ್ಟೇ; ಬುದ್ಧಿವಂತಿಕೆಗೆ ಮಿತಿ ಇರುತ್ತದೆ.

-ಆಲ್ಬರ್ಟ್ ಐನ್‌ಸ್ಟೀನ್

★ ಏನಾಗಿದೆ ಎನ್ನುವುದರ ಕಡೆಗೆ ನಾನು ಯಾವತ್ತೂ ನೋಡುವುದಿಲ್ಲ. ಏನು ಆಗಬೇಕಾಗಿದೆ ಎನ್ನುವುದನ್ನಷ್ಟೆ ನೋಡುತ್ತೇನೆ.

-ಗೌತಮ ಬುದ್ಧ